ಕರೆಯಲಿಲ್ಲ ಅಂದ್ರು... ಈಗ ನೋಡಿದರೆ ಅವಳಿಗೆ ಏನೇನೂ ಗೊತ್ತಿಲ್ಲ... ಏನು ಕೇಳಿದರೂ ಗೂಗಲ್ ನೋಡ್ತಾಳೆ" ಅಂದರು.

"ಅದು ನಿಜ ಅಲ್ಲವೇ ಸ್ವಾಮಿ? ಹೆಣ್ಣುಮಕ್ಕಳ ಅಡುಗೆಮನೆಯ ಡ್ಯೂಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಟೆಕ್ನಾಲಜಿಯಲ್ಲಿ ಮುಕ್ತಾಯವಾಗಬಹುದು ಅಂತ ಅವರು ಕನಸು ಕಂಡಿದ್ದರಲ್ಲಿ ತಪ್ಪೇನಿದೆ? ನೀವು ಎಂಜಿನಿಯರ್ ಸೊಸೆಯನ್ನ ಅಡುಗೆಮನೆಯ ಕೈ ಎನ್ನುವಂತೆ ಮಾತ್ರ ನೋಡುತ್ತಿದ್ದೀರಲ್ಲ? ಅವಳು ಎಂಜಿನಿಯರ್ ಅಂತಲೇ ತಾನೇ ನಿಮ್ಮ ಮಗನಿಗೆ ಮಾಡಿಕೊಂಡಿದ್ದು" ಅಂತ ಜಬರಿಸಿ ಹೇಳಬೇಕು ಅನ್ನಿಸಿದರೂ ಸುಮ್ಮನಾದೆ.

ಇದೆಲ್ಲಾ ಇಬ್ಬಂದಿಗಳ ನಡುವೆ ಎದೆಯುದ್ದ ಬೆಳೆದು ನಿಂತ ಮಕ್ಕಳು ಅಡುಗೆಮನೆಗೆ ಆಗಾಗ ಪ್ರತಿಭಟನಾ ರೂಪವಾಗಿ ಪ್ರವೇಶ ಮಾಡುವ ಪ್ರಯತ್ನ ಮಾಡುತ್ತಾರೆ. ನಮಗೇ ಅಚ್ಚರಿಯಾಗುವಂತೆ ನಾವು ನಮ್ಮ ಅಮ್ಮಂದಿರ ಮಾತುಗಳನ್ನೇ ಸಣ್ಣದಾಗಿ ಅಪ್ರಜ್ಞಾಪೂರ್ವಕವಾಗಿ ಹೇಳುತ್ತೇವೆ. "ಕೈ ಸರಿಯಾಗಿ ತ್ವಳಕಣಲ್ಲ..." ಅನ್ನುವಾಗ ಮಕ್ಕಳ ಕಣ್ಣು ಕೆಂಪಾಗುವುದನ್ನ ಕಂಡು ಧ್ವನಿ ಸಣ್ಣದು ಮಾಡುತ್ತಾ ಗೊಣಗುತ್ತೇವೆ. ಅಮ್ಮಂದಿರ ಜೊತೆಗಿನ ನಮ್ಮ ಅಡುಗೆ ಅಸ್ಮಿತೆಗೆ ಸಾಕ್ಷಿಯಾಗಿದ್ದ ಮಕ್ಕಳು ಗಟ್ಟಿಯಾಗಿಯೇ, "ನೋಡು ಮತ್ತೆ! ನೀನೂ ಆಜ್ಜಿ ಆದ ಹಾಗೆ ಆಗ್ತಿದೀಯ..." ಅಂತ ಹೇಳುತ್ತಾರೆ. ಅವರು ಹೇಳಿದ್ದು ಕೇಳಿಸಲಿಲ್ಲ ಅನ್ನುವ ಹಾಗೆ ನಟಿಸುತ್ತಾ ನಾವೇ ಹಾಕಿದ ಉಪ್ಪಿನಕಾಯಿಯ ಜಾಡಿಯನ್ನು ಮೌನವಾಗಿ ಹುಡುಕುತ್ತೇವೆ. ಮಕ್ಕಳೆಲ್ಲಾದರೂ ಅದಕ್ಕೆ ಒದ್ದೆ ಸೌಟು ಇಟ್ಟುಬಿಟ್ರೋ ಹೆಂಗೆ ಅಂತ ಕಣ್ಣಲ್ಲೇ ಪರಾಮರ್ಶಿಸುತ್ತಾ ಅಡುಗೆಮನೆಯ ಮೂಲೆಗೆ ಒಂದು ಕುರ್ಚಿ ಹಾಕಿಕೊಳ್ಳಬೇಕು ಅಂತ ಪ್ಲಾನ್ ಮಾಡುತ್ತೇವೆ. ಅಡುಗೆಮನೆಯೆಂಬ ನಶೆ ನಮ್ಮನ್ನೂ ಆವರಿಸಿಕೊಳ್ಳುತ್ತಿದೆ ಅನ್ನುವ ಅರಿವು ಮೂಡುವಷ್ಟರಲ್ಲಿ ಚಕ್ರವ್ಯೂಹವನ್ನು ಹೊಕ್ಕ ಅಭಿಮನ್ಯುವಿನಂತೆ ಆಗಿಬಿಡುತ್ತೇವೆ. ಇಲ್ಲಿಯೇ ಸಣ್ಣ ಉರಿಯಲ್ಲಿ ಹುರಿಯುತ್ತಾ ದಪ್ಪ ತಳದ ಪಾತ್ರೆಯಲ್ಲಿ ಗೂರಾಡುತ್ತಾ ವೀರಮರಣ ಹೊಂದುವ ಘಳಿಗೆಗಾಗಿ ಎದುರುನೋಡುತ್ತೇವೆ. ನಮಗೋ ಇಲ್ಲಿಗೆ ಬರುವ ದಾರಿ ಗೊತ್ತು! ಹೋಗುವ ದಾರಿ ಕಾಣಿಸುವುದೇ ಇಲ್ಲ.


**ಪ್ರೀತಿ ನಾಗರಾಜ**

ಒಂದು ಕೈಯಲ್ಲಿ ಕನ್ನಡದಲ್ಲೂ ಇನ್ನೊಂದು ಕೈಯಲ್ಲಿ ಇಂಗ್ಲಿಷ್‌ನಲ್ಲೂ ಬರೆಯುವ ಪ್ರೀತಿ ನಾಗರಾಜ ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು, ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ, 'ಸಿಎನ್‌ಬಿಸಿ' ಟೀವಿ ಚಾನೆಲ್‌ನಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ, ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.